ಓ.ಎಸ್. ನಂಃ 22/2017

**ಡಿ.ಡಬ್ಲ್ಯೂಃ 1**

**ದಿನಾಂಕ 02.09.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಮ್.ಸಿ.ಎಸ್. ವಕೀಲರಿಂದಃ**

11. 2014 ರಲ್ಲಿ ರದ್ದತಿ ಪತ್ರ ಮಾಡಿಸುವುದಾಗಿ ಹೇಳಿ ವಾದಿಯು ನಮ್ಮನ್ನು ಉಪನೊಂದಾಣಾಧಿಕಾರಿಗಳ ಕಚೇರಿಗೆ ಕರೆದುಕೊಂಡು ಹೋಗಿದ್ದರು ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ಸದರಿ ರದ್ದತಿ ಪತ್ರ ಮಾಡಿಸಿಕೊಳ್ಳಲು ನಮ್ಮನ್ನು ಉಪನೊಂದಾಣಾಧಿಕಾರಿಗಳ ಕಚೇರಿಗೆ ಕರೆದುಕೊಂಡು ಹೋಗಿದ್ದ ದಿನದಂದೇ ವಾದಿಯು ನಮ್ಮಿಂದ 4 ಖಾಲಿ ಛಾಪಾ ಕಾಗದಗಳಲ್ಲಿ ಸಹಿಗಳನ್ನು ಪಡೆದಿದ್ದರು. ನಮ್ಮಿಂದ ಪಡೆದಿದ್ದ ಸಹಿ ಮಾಡಿದ ಸದರಿ 4 ಖಾಲಿ ಛಾಪಾ ಕಾಗದಗಳನ್ನು ದುರುಪಯೋಗಪಡಿಸಿಕೊಂಡು ವಾದಿಯಾದ ಕಾಳೇಗೌಡ, ಶಶಿಕಲಾ ಮತ್ತು ಗಾಯತ್ರಿರವರು ನಮ್ಮ ವಿರುದ್ಧ ಸುಳ್ಳು ಪ್ರಕರಣಗಳನ್ನು ಹೂಡಿರುತ್ತಾರೆ. ನಮ್ಮಿಂದ ಪಡೆದಿದ್ದ ಸಹಿ ಮಾಡಿದ ಸದರಿ 4 ಖಾಲಿ ಛಾಪಾ ಕಾಗದಗಳನ್ನು ವಾದಿಯಾದ ಕಾಳೇಗೌಡ, ಶಶಿಕಲಾ ಮತ್ತು ಗಾಯತ್ರಿರವರು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದು ನಾವು ಅವರ ವಿರುದ್ಧ ದೂರನ್ನು ನೀರುವುದಿಲ್ಲ ಆದರೆ ಕಾಳೇಗೌಡರವರ ಮಗನಾದ ಸೋಮಶೇಖರ ಹಾಗೂ ಗಾಯತ್ರಿರವರ ಮಗನಾದ ಮಹದೇವರವರ ವಿರುದ್ಧ ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇವೆ.

12. ನಮ್ಮಿಂದ ಖಾಲಿ ಪತ್ರಕ್ಕೆ ಸಹಿ ಪಡೆದು ದಾಖಲೆಗಳನ್ನು ಸೃಷ್ಟಿಸಿ ನಮಗೆ ಮೋಸಮಾಡಿರುತ್ತಾರೆ ಎಂದು ನಾವು ವಾದಿಯಾದ ಕಾಳೇಗೌಡರವರ ಮಗನಾದ ಸೋಮಶೇಖರ ಹಾಗೂ ಗಾಯತ್ರಿರವರ ಮಗನಾದ ಮಹದೇವರವರ ವಿರುದ್ಧ ದೂರನ್ನು ನೀಡಿರುವುದಿಲ್ಲ ಬದಲಾಗಿ ಸದರಿ ಸೋಮಶೇಖರ ಮತ್ತು ಮಹದೇವರವರು ನಮ್ಮ ಮನೆಗೆ ಬಂದು ಗಲಾಟೆ ಮಾಡಿದ್ದಾರೆ ಎಂದು ನಾವು ಅವರ ವಿರುದ್ಧ ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇವೆ. ನಮ್ಮಿಂದ ಪಡೆದಿದ್ದ ಸಹಿ ಮಾಡಿದ 4 ಖಾಲಿ ಛಾಪಾ ಕಾಗದಗಳನ್ನು ದುರುಪಯೋಗಪಡಿಸಿಕೊಂಡು ಶಶಿಕಲಾ

ಮತ್ತು ಗಾಯತ್ರಿರವರು ನಮ್ಮ ವಿರುದ್ಧ ಸುಳ್ಳು ಪ್ರಕರಣಗಳನ್ನು ಹೂಡಿರುತ್ತಾರೆ ಎಂದು ಪ್ರತಿವಾದ ಪತ್ರದಲ್ಲಿ ಬರೆದಿರುವುದಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಉತ್ತರವನ್ನು ನೀಡದೇ ಮೌನವಾಗಿ ನಿಂತಿರುತ್ತಾರೆ. ಸದರಿ ವಿಷಯವನ್ನು ನಾವು ಪ್ರತಿವಾದ ಪತ್ರದಲ್ಲಿ ಹೇಳದೇ ಮೊಟ್ಟ ಮೊದಲ ಬಾರಿಗೆ ಕೇವಲ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ.

13. ನಿಪಿ.3 ರ ಛಾಪಾ ಕಾಗದದ ದಿನಾಂಕವು 13.01.2014 ಆಗಿರುತ್ತದೆ ಎಂದರೆ ಸರಿ. ಗಾಯತ್ರಿರವರೊಂದಿಗೆ ಮಾಡಿದ ವ್ಯವಹಾರದ ದಿನಾಂಕವು 20.11.2015 ಆಗಿರುತ್ತದೆ ಎಂದರೆ ಸರಿ. ಈ ದಾವೆಯ ವ್ಯವಹಾರಕ್ಕೂ ಮತ್ತು ಗಾಯತ್ರಿರವರೊಂದಿಗೆ ಮಾಡಿದ ವ್ಯವಹಾರಕ್ಕೂ ಸುಮಾರು 1 ½ ವರ್ಷಗಳ ಅಂತರವಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ವಾದಿಯಾದ ಕಾಳೇಗೌಡ, ಶಶಿಕಲಾ ಮತ್ತು ಗಾಯತ್ರಿ ಇವರು ಮೂರು ಜನರ ವ್ಯವಹಾರಗಳು ಸಹ ಬೇರೆ-ಬೇರೆ ಎಂದರೆ ಸರಿಯಲ್ಲ. ಶಶಿಕಲಾರವರಿಗೂ ಮತ್ತು ಈ ದಾವೆಗೂ ಯಾವುದೇ ಸಂಬಂಧ ಇಲ್ಲದಿದ್ದರು ಸಹ ವಿನಾಕಾರಣ ಅವರನ್ನು ಈ ದಾವೆಯಲ್ಲಿ ಸೇರಿಸುತ್ತಿದ್ದೇನೆ ಎಂದರೆ ಸರಿಯಲ್ಲ.

14. ನಾನು ಯಾರಿಗೂ ಸಹ ನನ್ನ ಚೆಕ್ಕನ್ನು ನೀಡಿರಲಿಲ್ಲ ಬದಲಾಗಿ ನನ್ನ ಚೆಕ್ಕು ಕಳೆದು ಹೋಗಿತ್ತು. ನಾನು ವಾದಿಯಾದ ಕಾಳೇಗೌಡರಿಗೂ ಸಹ ನನ್ನ ಚೆಕ್ಕನ್ನು ಕೊಟ್ಟಿರುವುದಿಲ್ಲ. ನಾನು ವಾದಿಯಾದ ಕಾಳೇಗೌಡರಿಗೆ ನನ್ನ ಚೆಕ್ಕನ್ನು ಕೊಡದಿದ್ದರು ಸಹ ಕೊಟ್ಟಿದ್ದೇನೆ ಎಂದು ಪ್ರತಿವಾದ ಪತ್ರದ 5 ನೇ ಕಂಡಿಕೆಯಲ್ಲಿ ಸುಳ್ಳು ಹೇಳಿರುತ್ತೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಪ್ರತಿವಾದ ಪತ್ರವನ್ನು ನಾನು ಸಲ್ಲಿಸಿರುವುದಿಲ್ಲ ನನ್ನ ಸಹೋದರನಾದ 3 ನೇ ಪ್ರತಿವಾದಿಯು ಸಲ್ಲಿಸಿದ್ದು, ಪ್ರತಿವಾದ ಪತ್ರದ 5 ನೇ ಕಂಡಿಕೆಯಲ್ಲಿ ವಾದಿಯಾದ ಕಾಳೇಗೌಡರಿಗೆ ಚೆಕ್ಕನ್ನು ಕೊಟ್ಟಿರುವ ಬಗ್ಗೆ ಹೇಳಿರುವುದು ಸುಳ್ಳು ಎಂದು ನುಡಿದಿರುತ್ತಾರೆ. ನಾವು ಗಾಯತ್ರಿರವರಿಗೆ ಚೆಕ್ಕು ಕೊಟ್ಟಿದ್ದೇವೆ ಎಂದು ಅಸಲು ದಾವೆ ಸಂಖ್ಯೆ382/2018 ರಲ್ಲಿ ಸಲ್ಲಿಸಿದ ಪ್ರತಿವಾದ ಪತ್ರದಲ್ಲಿ ಹೇಳಿರುವುದಿಲ್ಲ. ಅದೇ ರೀತಿ ನಾವು ಶಶಿಕಲಾರವರಿಗೆ ಚೆಕ್ಕು ಕೊಟ್ಟಿದ್ದೇವೆ ಎಂದು ಅಸಲು ದಾವೆ ಸಂಖ್ಯೆ 116/2019 ರಲ್ಲಿ ಸಲ್ಲಿಸಿದ ಪ್ರತಿವಾದ ಪತ್ರದಲ್ಲಿ ಹೇಳಿರುವುದಿಲ್ಲ. ವಾದಿಯಾದ ಕಾಳೇಗೌಡ, ಶಶಿಕಲಾ ಮತ್ತು ಗಾಯತ್ರಿರವರೊಂದಿಗೆ ಮಾಡಿದ ವ್ಯವಹಾರಗಳು ಬೇರೆ-ಬೇರೆ ವ್ಯವಹಾರಗಳಾಗಿದ್ದರು ಸಹ ಸುಳ್ಳು ಕತೆ ಕಟ್ಟಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

15. ವಾದಿಯಿಂದ ಪಡೆದ ಸಾಲದ ಹಣವನ್ನು ಮರುಪಾವತಿ ಮಾಡಲು ತಪ್ಪಿಸುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯಾದ ಕಾಳೇಗೌಡ, ಶಶಿಕಲಾ ಮತ್ತು ಗಾಯತ್ರಿರವರು ನಮಗೆ ಮೋಸ ಮಾಡದ ಕಾರಣ ಇಲ್ಲಿಯವರೆಗೂ ನಾವು ಅವರ ವಿರುದ್ದ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 16.01.2014 ರಂದು ನಾವು ವಾದಿಯಿಂದ ಪಡೆದ 80,000/- ರೂಪಾಯಿ ಸಾಲದ ಹಣವನ್ನು ಮತ್ತು ಅದಕ್ಕೆ ತಗಲುವ ಬಡ್ಡಿಯನ್ನು ವಾದಿಗೆ ಮರುಪಾವತಿಸಲು ಬಾಧ್ಯಸ್ತವಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**